		2) ಜಾವ	100
		3) ಸೀರ	100
		4) ಪಾರೆ/ ಕಂಬಳ	124
		5) ಟವಲ್	50
		6) ಶರ್ಟ	100
		7) ಟವಲ್	120
		8) ಲುಂಗಿ	100
43	ತಹಶೀಲ್ದಾರ ಮುದ್ದೇಬಿಹಾಳ	ಅಕ್ಕಿ	25.26 ಕ್ವಿಂಟಲ್

ನೆರೆ ಹಾವಳಿ

572 (910) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ನೆರೆ ಹಾವಳಿಯಿಂದಾಗಿ ಸಂಪೂರ್ಣ ಹಾಗೂ ಭಾರಿ ಹಾನಿಗೊಳಗಾದವರ ಮನೆಗಳ ಪರಿಹಾರ ಹಂಚಿಕೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, ತಪ್ಪಿತಸ್ಥರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ವಂಚಿತರಾದ ಫಲಾನುಭವಿಗಳಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿರುವುದೇ;

ಈ) ಬಿಜಾಪುರ ಜಿಲ್ಲೆಯಲ್ಲಿ ಒಟ್ಟು ಬಿದ್ದ ಮನೆಗಳ ಸಂಖ್ಯೆಯ ವಿವರವಾದ ಮಾಹಿತಿ ನೀಡುವುದು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಸಂಪೂರ್ಣ ಹಾನಿ/ ಭಾರಿ ಹಾನಿಗೊಳಗಾದ ಮನೆಗಳ ಪರಿಹಾರ ಪಾವತಿಸುವಲ್ಲಿ ತಾರತಮ್ಯವಾಗಿಲ್ಲ. ಆದರೆ ಕೆಲವು ದೂರುಗಳ ಹಿನ್ನಲೆಯಲ್ಲಿ ಮರು ಸಮೀಕ್ಷೆ ಮಾಡಿಸಿ ಅರ್ಹ ಫಲಾನುಭವಿಗಳಿಗೆ ಪರಿಹಾರ ಪಾವತಿಸಲು ಕ್ರಮ ಜರುಗಿಸಲಾಗಿದೆ.

ಆ) ಅನರ್ಹ ಫಲಾನುಭವಿಗಳಿಗೆ ಪರಿಹಾರ ಪಾವತಿಯಾಗಿರುವ ಪ್ರಕರಣಗಳಲ್ಲಿ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಯವರ ವಿರುದ್ಧ ಕ್ರಮ

ಜರುಗಿಸಲು ಸೂಚಿಸಲಾಗಿದೆ. ಹಾಗೂ ತಪ್ಪು ಮಾಹಿತಿ ನೀಡಿ ಅಕ್ರಮವಾಗಿ ಮನೆ ಪರಿಹಾರ ಪಡೆದ ಫಲಾನುಭವಿಗಳ ವಿರುದ್ಧವು ಸಹ ಕ್ರಮ ಜರುಗಿಸಲಾಗುತ್ತಿದೆ.

ಇ) ಕ್ರಮ ಕೈಗೊಳ್ಳಲಾಗಿರುತ್ತದೆ.

ಈ) ಬಿದ್ದ ಮನೆಗಳ ಮಾಹಿತಿಯನ್ನು ತಃಖ್ತೆಯಲ್ಲಿ ಲಗತ್ತಿಸಿದೆ.

ಜಮೀನುಗಳಿಗೆ ಪರಿಹಾರ

673 (909) ಶ್ರೀ ಪಾಟೀಲ್ ಎ.ಎಸ್ (ನಡಹಳ್ಳಿ) ದೇವರ ಹಿಪ್ಪರಗಿ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಕಳೆದ ತಿಂಗಳು ಬಿದ್ದ ಭಾರಿ ಮಳೆ ಪ್ರವಾಹದಿಂದಾಗಿ ಡೋಣಿ ನದಿ ದಂಡೆಯ ಎಷ್ಟು ಎಕರೆ ಜಮೀನು ಸಂಪೂರ್ಣವಾಗಿ ಕೊಚ್ಚಿ ಹೋಗಿರುತ್ತದೆ; (ಎಕರೆವಾರು ಬೆಳೆ ಸಮೇತ ಗ್ರಾಮ ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಆ) ಸದರಿ ಕೊಚ್ಚಿ ಹೋಗಿರುವ ರೈತರ ಜಮೀನುಗಳಿಗೆ ತಲಾ ಎಕರೆಗೆ ಎಷ್ಟು ಪರಿಹಾರ ನೀಡಲಾಗುತ್ತಿದೆ;

ಇ) ಪರಿಹಾರ ನೀಡಿದ್ದಲ್ಲಿ ಇದುವರೆವಿಗೂ ಎಷ್ಟು ರೈತರಿಗೆ ಜಮೀನಿಗೆ ಪರಿಹಾರ ಒದಗಿಸಿದಂತಾಗಿದೆ (ಗ್ರಾಮವಾರು ರೈತರ ಹೆಸರಿನೊಂದಿಗೆ, ವಿಧಾನಸಭಾವಾರು ವಿವರ ನೀಡುವುದು);

ಈ) ಅತಿವೃಷ್ಟಿಯಿಂದ ನದಿ ಕಣಿವೆ ಪಾತ್ರದ ಜಮೀನುಗಳ ಜೊತೆ ಹಳ್ಳ ಕೆರೆ ಪಾತ್ರದ ಜಮೀನುಗಳು ಸಹ ಪ್ರವಾಹದಿಂದ ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಉ) ಬಂದಿದ್ದಲ್ಲಿ, ಸದರಿ ರೈತರಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಜಿಲ್ಲೆಯಲ್ಲಿ 2009ನೇ ಸಾಲಿನ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಡೋಣಿ ನದಿ ದಂಡೆಯ ನಾಲ್ಕು ತಾಲ್ಲೂಕಿನ ಗ್ರಾಮಗಳಲ್ಲಿನ ಜಮೀನುಗಳು ಕೊಚ್ಚಿಕೊಂಡು ಹೋಗಿರುತ್ತದೆ. ಈ ಬಗ್ಗೆ ಜಲಾನಯನ